A—Smt. LEELAVATHI VENKATESH MAGADI (Deputy Minister for Rural Industries).—

(*a*) The Society was registered on 3rd September 1957.

(*b*) Yes.

ಶ್ರೀ ಇ. ನಾರಾಯಣಗೌಡ.—ನನ್ನ (ಬ) ಪ್ರಶ್ನೆಗೆ ಉತ್ತರವಾಗಿ ಹೌದು ಎಂದು ಹೇಳಿದ್ದೀರಿ. ಹಾಗಿದ್ದ ಪಕ್ಷದಲ್ಲಿ ಎಷ್ಟು ಋಣ ದುರುಪಯೋಗವಾಗಿದೆ ?

ಶ್ರೀಮತಿ ಲೀಲಾವತಿ ವಿ. ಮಾಗಡಿ.—ಕೇವಲ 150 ರೂಪಾಯಿಗಳು ಮಾತ್ರ ಆ ಸಂಘದಲ್ಲಿ ದುರುಪಯೋಗವಾಗಿದೆ. ಅದನ್ನು ಅಸೆಸ್ ಮಾಡಿದ್ದೇವೆ.

ಶ್ರೀ ಇ. ನಾರಾಯಣಗೌಡ.—ಈ ರೀತಿ ಹಣ ದುರುಪಯೋಗವಾಗುವುದಕ್ಕೆ ಸಂಘದ ಲೆಕ್ಕಗಳನ್ನು ಆಡಿಟ್ ಮಾಡಿರಲಿಲ್ಲವೇ ?

ಶ್ರೀಮತಿ ಲೀಲಾವತಿ ವಿ. ಮಾಗಡಿ.—ಆ ಸೊಸೈಟಿ ಲೆಕ್ಕಗಳು ಈ ಸಲ ಆಡಿಟ್ ಆಗಿವೆ. ಕೊನೆಯ ಆಡಿಟ್ 30ನೇ ಜೂನ್ 1958ರಲ್ಲಿ ಆಗಿದೆ.

ಶ್ರೀ ಇ. ನಾರಾಯಣಗೌಡ.—ಸೆಕ್ರೆಟರಿಯವರು ಆ ಸೊಸೈಟಿಯಲ್ಲಿ ದುರುಪಯೋಗ ಮಾಡಿರುವ ಹಣದ ಪೈಕಿ ಬರೀ ಷೇರು ಪೊಬಲಗುಗಳನ್ನು ಮಾತ್ರ ಅವರು ದುರುಪಯೋಗಪಡಿಸಿದ್ದಾರೆಂಬ ದೂರು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀಮತಿ ಲೀಲಾವತಿ ವಿ. ಮಾಗಡಿ.—ಅದು ಸರ್ಕಾರದ ಗಮನಕ್ಕೆ ಬಂದಿಲ್ಲ.

Award of Scholarships to the Students of Middle and High Schools.

*Q.—349. Sri B. RACHIAH (Chamarajanagar).—

Will the Government be pleased to state :—

(*a*) the total number of applications for scholarships received from students studying in middle and high schools in the State during the year 1958-59 ;

(*b*) the total number of scholarships awarded ?

A.—Sri ANNA RAO GANAMUKHI (Minister for Education).—

	High Schools	Middle Schools
(*a*)	38,308	46,551
(*b*)	9,067	11,164

The above information is in respect of scholarships awarded by the Director of Public Instruction in Mysore, Bangalore, only. The information in respect of scholarships awarded by the Director of Social Welfare, Bangalore, is not readily available.

ಶ್ರೀ ಬಿ. ರಾಚಯ್ಯ.—ವಿದ್ಯಾರ್ಥಿ ವೇತನಕ್ಕಾಗಿ ಬಂದ ಅರ್ಜಿಗಳ ಪೈಕಿ ಬಾಲಕಿಯರ ಸಂಖ್ಯೆ ಎಷ್ಟು ಮತ್ತು ಬಾಲಕರ ಸಂಖ್ಯೆ ಎಷ್ಟು ?

ಶ್ರೀ ಅಣ್ಣಾರಾವ್ ಗಣಮುಖಿ.—ಅದನ್ನು ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಬಿ. ರಾಚಯ್ಯ.—ಪ್ರತಿಯೊಂದು ಹೈಸ್ಕೂಲಿನ ವಿದ್ಯಾರ್ಥಿಗೂ ಮತ್ತು ಪ್ರತಿಯೊಂದು ಮಿಡಲ್ ಸ್ಕೂಲಿನ ವಿದ್ಯಾರ್ಥಿಗೂ ಪ್ರತಿ ತಿಂಗಳು ಕೊಡತಕ್ಕ ವಿದ್ಯಾರ್ಥಿ ವೇತನದ ಮೊಬಲಗು ಎಷ್ಟು ?

ಶ್ರೀ ಅಣ್ಣಾರಾವ್ ಗಣಮುಖಿ.—ಹೈಸ್ಕೂಲಿನ ವಿದ್ಯಾರ್ಥಿಗ ಆರು ರೂಪಾಯಿಗಳು, ಮಿಡಲ್ ಸ್ಕೂಲಿನ ವಿದ್ಯಾರ್ಥಿಗೆ ಮೂರು ರೂಪಾಯಿಗಳು.

ಶ್ರೀ ಬಿ. ರಾಚಯ್ಯ.—ಒಟ್ಟು ಅರ್ಜಿಗಳ ಪೈಕಿ ಎಷ್ಟು ಅರ್ಜಿಗಳು ತಿರಸ್ಕೃತವಾಗಿವೆ ?

ಶ್ರೀ ಅಣ್ಣಾರಾವ್ ಗಣಮುಖಿ.—ತಿರಸ್ಕೃತವಾದ ಅರ್ಜಿಗಳ ಪಟ್ಟಿ ಉತ್ತರದಲ್ಲಿಯೇ ಕೊಟ್ಟಿದೆ.

ಶ್ರೀ ಬಿ. ರಾಚಯ್ಯ.—ಅರ್ಜಿ ಹಾಕಿರುವವರೆಲ್ಲರಿಗೂ ವಿದ್ಯಾರ್ಥಿ ವೇತನ ಕೊಡುವುದಕ್ಕೆ ಎಷ್ಟು ಅಂದಾಜು ಆಗುತ್ತದೆ ?

†ಶ್ರೀ ಅಣ್ಣಾರಾವ್ ಗಣಮುಖಿ.—ವಿದ್ಯಾರ್ಥಿ ವೇತನ ಮಂಜೂರಾಗಿರತಕ್ಕ ಅಂಕಅಂಶಗಳ ಆಧಾರದ ಮೇರೆ ಅದನ್ನು ಲೆಕ್ಕ ಹಾಕಬೇಕಾಗುತ್ತದೆ. ಆದರೆ ಅರ್ಜಿ ಹಾಕಿದವರೆಲ್ಲರಿಗೂ ವಿದ್ಯಾರ್ಥಿ ವೇತನ ಕೊಡುವುದಕ್ಕೆ ಎಲ್ಲ ಸಾಧ್ಯ ? ಅದು ಹೇಗೆ ಸಾಧ್ಯ ? ಸಾಮಾನ್ಯವಾಗಿ ಕಾಲು ಭಾಗದಷ್ಟು ವಿದ್ಯಾರ್ಥಿಗಳಿಗೆ ಮಾತ್ರ ಈ ವಿದ್ಯಾರ್ಥಿ ವೇತನವನ್ನು ಕೊಡುವುದಕ್ಕೆ ಸರ್ಕಾರಕ್ಕೆ ಶಕ್ತಿ ಇದೆ.

ಶ್ರೀ ಬಿ. ರಾಚಯ್ಯ.—ಎಲ್ಲರವರೆಲ್ಲರಿಗೂ ಆರೀತಿ ಕೊಡುವುದಕ್ಕೆ ಈ ವರ್ಷವೇನಾದರೂ ಹೆಚ್ಚಿಗೆ ಹಣವನ್ನು ಒದಗಿಸಿದ್ದೀರಾ ?

ಶ್ರೀ ಅಣ್ಣಾರಾವ್ ಗಣಮುಖಿ.—ಈ ವರ್ಷದ ಬಡ್ಜೆಟ್ಟಿನಲ್ಲಿ ಐದು ಲಕ್ಷ ರೂಪಾಯಿಗಳನ್ನು ಈ ಬಾಬಿಗೆ ಹೆಚ್ಚಿಗೆ ಒದಗಿಸಿದೆ.

ಶ್ರೀ ಬಿ. ರಾಚಯ್ಯ.—ನಿಮ್ಮ ತರಗತಿಗೆ ಕೇವಲ 75 ಸಾವಿರ ರೂಪಾಯಿಗಳನ್ನು ಮಾತ್ರ ಒದಗಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಅಣ್ಣಾರಾವ್ ಗಣಮುಖಿ.—ಬಂದಿದೆ. ಆದರೆ ಸೋಷಿಯಲ್ ವೆಲ್‌ಫೇರ್ ಬೋರ್ಡಿನವರು ಹೈದರಾಬಾದ್, ಸೌತ್ ಕೆನರಾ, ಮೈಸೂರು ಮತ್ತು ಕೊಡಗುಗಳಲ್ಲಿ ಇನ್ನು ಬೇರೆ ತರಹ ರೀತಿಯಲ್ಲಿ ಸ್ಕಾಲರ್‌ಷಿಪ್ ಕೊಡುತ್ತಾರೆ. ಅದರ ಪಟ್ಟಿ ನನ್ನಲ್ಲಿ ಈಗ ಇಲ್ಲ.

Sri C. K. RAJIAH SETTY.—May I know when these scholarships were distributed this year ?

Sri ANNA RAO GANAMUKHI.—The supplementary does not pertain to this question.

Sri C. K. RAJIAH SETTY.—It definitely pertains to this question.

Sri ANNA RAO GANAMUKHI.—That information is not with me.

ಶ್ರೀ ಕೆ. ಎಲ್. ನರಸಿಂಹಯ್ಯ.—(ಎ) ಪ್ರಶ್ನೆಗೆ ಉತ್ತರವಾಗಿ ಮಿಡಲ್‌ಸ್ಕೂಲ್ ವಿದ್ಯಾರ್ಥಿಗಳಿಂದ 46,551 ಅರ್ಜಿಗಳು ಬಂದಿವೆ ಎಂದು ಹೇಳಿದ್ದೀರಿ. ಇದರಲ್ಲಿ ಎಸ್. ಟಿ. ಎಂ. ಸ್ಕೂಲಿನವರೂ ಸೇರಿದ್ದಾರೋ ಅಥವಾ ಬರೀ ಮಿಡಲ್‌ಸ್ಕೂಲಿನವರು ಮಾತ್ರವೋ ?

ಶ್ರೀ ಅಣ್ಣಾರಾವ್ ಗಣಮುಖಿ.—ಎಸ್. ಟಿ. ಎಂ. ಸ್ಕೂಲಿನ ವಿದ್ಯಾರ್ಥಿಗಳ ಅರ್ಜಿಗಳೂ ಸೇರಿವೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಮಿಡಲ್ ಸ್ಕೂಲಿನ ವಿದ್ಯಾರ್ಥಿಗೆ ಮೂರು ರೂಪಾಯಿಗಳಂತೆಯೂ ಹೈಸ್ಕೂಲಿನ ವಿದ್ಯಾರ್ಥಿಗೆ ಆರು ರೂಪಾಯಿಗಳಂತೆಯೂ ವಿದ್ಯಾರ್ಥಿ ವೇತನವನ್ನು ಎಂದಿನಿಂದ ಕೊಡುತ್ತಿದ್ದೀರಿ ?

ಶ್ರೀ ಅಣ್ಣಾರಾವ್ ಗಣಮುಖಿ.—ಮೊದಲಿನಿಂದಲೂ ಕೊಡುತ್ತಿದ್ದೇವೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಈಚೆಗೆ ಸರ್ಕಾರದಲ್ಲಿ ಎಲ್ಲರ ಸಂಬಳಸಾರಿಗೆಗಳನ್ನು ಹೆಚ್ಚಿಸುತ್ತಿದ್ದೀರಿ. ಅದರ ಹಾಗೆ ಈ ವಿದ್ಯಾರ್ಥಿವೇತನಗಳನ್ನು ಏತಕ್ಕೋಸ್ಕರ ಹೆಚ್ಚಿಸಲಿಲ್ಲ ?

ಶ್ರೀ ಅಣ್ಣಾರಾವ್ ಗಣಮುಖಿ.—ಹಣವಿಲ್ಲ. ಅದಕ್ಕೋಸ್ಕರ ವಿದ್ಯಾರ್ಥಿವೇತನಗಳು ಹೆಚ್ಚಾಗಲಿಕ್ಕಿಲ್ಲ.

Sri C. M. ARUMUGHAM.—It is stated here "The information in respect of scholarships awarded by the Director of Social Welfare, Bangalore, is not readily available"; may I know what is meant by 'not readily available'?

Sri ANNA RAO GANAMUKHI.—Information has been called for from the Director of Social Welfare Board; that information has not yet been supplied.

ಶ್ರೀ ಎಸ್. ನುಟ್ಟಯ್ಯನಾಯಕ್.—ಮಿಡಲ್ ಮತ್ತು ಹೈಸ್ಕೂಲಿನ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನಕ್ಕಾಗಿ ಯಾರಿಗೆ ಅರ್ಜಿಹಾಕಿಕೊಳ್ಳಬೇಕು ?

ಶ್ರೀ ಅಣ್ಣಾರಾವ್ ಗಣಮುಖಿ.—ತಂತಮ್ಮ ಸ್ಕೂಲುಗಳಲ್ಲಿರತಕ್ಕ ಹೆಡ್‌ಮಾಸ್ಟರುಗಳಿಗೆ.

Amount allotted for Rural Communication Works in the State.

Q.—412. Sri K. KENCHAPPA (Hiriyur).—

Will the Government be pleased to state:—

(*a*) the amouts allotted and assigned to each district in the State for rural communication works each year since 1956-57;

(*b*) the number and miles of fresh roads formed out of this amount in each district;

(*c*) the conditions of these roads at present?

A.—Sri T. SUBRAMANYA (Minister for Law, Labour and Local Self-Government).—

(*a*) Statement 'I' appended.

(*b*) Statement 'II' appended.

(*c*) Statement 'III' appended.

STATEMENT I

Sl. No.	Districts	The amount allotted and assigned to each District		
		1956-57	1957-58	1958-59
		Rs.	Rs.	Rs.
1	Mysore	95,000	1,00,800	1,15,656
2	Hassan	82,000	51,000	99,350
3	Chickmagalur ...	76,000	55,500	73,300
4	Coorg	...	...	50,000
5	South Kanara ...	74,500	63,500	1,08,530
6	Mandya	72,000	54,800	95,727
7	Shimoga	86,000	64,500	84,100
8	Gulbarga	...	45,000	99,160
9	Bidar	26,000	40,000	43,193
10	Raichur	...	25,500	1,08,633
11	Bangalore	1,00,000	95,000	1,02,000
12	Tumkur	91,000	83,000	1,56,000
13	Kolar	95,000	1,83,100	1,48,000
14	Chitradurga	1,27,000	1,46,425	95,468
15	Bellary	76,000	82,000	1,12,910
16	Belgaum	56,000	1,10,000	1,11,000
17	Bijapur	51,000	1,05,000	1,60,000
18	Dharwar	56,000	1,07,973	1,47,973
19	North Kanara ...	45,000	75,000	74,000
		12,08,500	14,83,098	19,85,000